ಅಧ್ಯಕ್ಷರ ಅಪ್ಪಣೆಯ ಮೇರೆಗೆ

ರಾಜಸ್ಥಾನದ ರಾಜ್ಯದ ಪೊಕ್ರಾನ್ ನಲ್ಲಿ ಮೂರು ಅಣ್ವಸ್ತ್ರಸಾಧನಾ ಪ್ರಯೋಗ ಯಶಸ್ವಿಯಾಗಿ ನಡೆದಿರುವುದಕ್ಕೆ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವ ನಿರ್ಣಯ ಮಂಡನೆ.

ಶ್ರೀ. ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ನಿನ್ನೆ ರಾಜಸ್ಥಾನದ ರಾಜ್ಯದ ಪೊಕ್ರಾನ್‌ನಲ್ಲಿ ಮೂರು ಅಣ್ವಸ್ತ್ರ ಸಾಧನಗಳ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದ್ದು ದೇಶದ ಪರಮಾಣು ಸಾಮರ್ಥ್ಯದಲ್ಲಿ ಇದೊಂದು ಭಾರಿ ಸಾಧನೆ ಎಂದು ಈ ಹಿನ್ನೆಲೆಯಲ್ಲಿ ನಾನು ಮುಖ್ಯಮಂತ್ರಿಗಳಿಗೆ ನಾವು ಈ ಕಡೆ ನಿರ್ಣಯ ಮಂಡನೆ ಮಾಡುವುದಕ್ಕಿಂತ ಕನಿಷ್ಟ ಕೇಂದ್ರ ಸರ್ಕಾರಕ್ಕೆ ಇಂಥ ವಿಶೇಷವಾದ ಸಾಧನೆ ಮಾಡಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸಿ ಈ ಸದನದಲ್ಲಿ ಒಂದು ನಿರ್ಣಯವನ್ನು ಮಾಡಬೇಕೆಂದು ಹೇಳಿದ್ದೆ ದಯವಿಟ್ಟು ಅದನ್ನುಮಂಡನೆ ಮಾಡಬೇಕು.

ಶ್ರೀ. ವಾಟಾಳ್ ನಾಗರಾಜ್ : ತಾವು ಸಮಗ್ರವಾದ ಒಂದು ನಿರ್ಣಯವನ್ನು ತಾವು ಮಂಡಿಸಿ.

ಶ್ರೀ. ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಲಿಖಿತವಾದ ನಿರ್ಣಯವನ್ನೇ ಮಂಡಿಸುತ್ತೇನೆ. ಆ ನಂತರ ಅದನ್ನು ಅಧ್ಯಕ್ಷರಿಗೆ ಒಪ್ಪಿಸುತ್ತೇನೆ. ಆದರ ಈ ವಿಷಯ ಇಡೀ ಸದನ, ಇಡೀ ರಾಷ್ಟ್ರ ಹೆಮ್ಮೆ ಪಡತಕ್ಕಂತಹ ವಿಷಯವಾಗಿದೆ. ಇದು ಯಾರ ಕಾಲದಲ್ಲಾಯಿತು ಎನ್ನುವ ಆ ರಾಜಕಾರಣಕ್ಕೆ ಹೋಗುವುದು ಬೇಡ. ಇದಕ್ಕೋಸ್ಕರ ಶ್ರಮಿಸಿರುವ ವಿಜ್ಞಾನಿಗಳಿಗೆ ಇದಕ್ಕೋಸ್ಕರ ಪ್ರಾಣ ಕಳೆದುಕೊಂಡಿರತಕ್ಕಂಥ ಸಾವಿರಾರು ಕೆಲಸಗಾರರಿಗೆ, 20 ವರ್ಷಗಳ ಸತತ ಶ್ರಮದಿಂದ, ನಮ್ಮ್ ಸ್ವಂತ ಶಕ್ತಿಯಿಂದ ಇವತ್ತು ಅಣುಬಾಂಬ್‌ನಿಂದ ವಿಶ್ವದ ಶಾಂತಿ ನಾಶವಾಗುತ್ತದೆಂದು ವಾದ ಮಾಡುವವರು ಬಹಳ ಜನರಿದ್ದಾರೆ. ಅಣುಬಾಂಬ್ ಉಪಯೋಗಿಸಿದರೆ ನಾಶವಾಗುತ್ತೇವೆ ನಿಜ, ನಮ್ಮ ಹತ್ತಿರ ಅಣುಬಾಂಬ್ ಇಲ್ಲವೆಂದರೆ ಕೆಲವರಿಗೆ ಧೈರ್ಯ ಬರುತ್ತದೆ. ಅಣುಬಾಂಬ್ ನಮ್ಮ ಹತ್ತಿರ ಇದೆ ಎಂದರೆ ಶಾಂತಿ ಸ್ಥಾಪನೆಯಾಗುತ್ತದೆ, ಶಾಂತಿ ಸ್ಥಾಪನೆಗೋಸ್ಕರವು ಬಾಂಬ್ ಬೇಕಾಗಿದೆ. This may look a paradoxical argument. ಆದುದರಿಂದ ಇವತ್ತು ಯಾವ್ಯಾವ ರಾಷ್ಟ್ರಗಳು ಅಣುಬಾಂಬ್ ಇಟ್ಟುಕೊಂಡಿದ್ದಾರೋ ಅವರಿಗೆ ಇನ್ನು ಮೇಲೆ ವಿಶ್ವಶಾಂತಿಯ ಬಗ್ಗೆ ನಿಮ್ಮಷ್ಟೇ ನಮಗೂ ಕಾಳಜಿ ಇದೆ ನೀವು ಸಿಟಿಬಿಟಿಗಾದರೂ ಸಹಿ ಮಾಡಿ ಎನ್ನುವ ಸಂದೇಶವನ್ನು ಕೊಟ್ಟಿದ್ದೇವೆ; ಇಲ್ಲಿಯವರೆಗೆ ಏನು ಮಾಡುತ್ತಿದ್ದರು? ಅವರು ಬೇಕಾದರೆ ಅಣ್ವಸ್ತ್ರ ಟೆಸ್ಟ್ ಮಾಡಬಹುದು ಅವರ ಮನೆಗೆ ಬೇಕಾದರೆ ಅಣುಬಾಂಬ್ ಇಟ್ಟುಕೊಳ್ಳಬಹುದು, ಬೇರೆಯವರು ಮಾಡುವ ಹಾಗಿಲ್ಲ. ಅದಕ್ಕೆ ಎಲ್ಲಾ ರಾಷ್ಟ್ರಗಳ ಕಣ್ಣಿಗೆ ಬಹಳ ಆಶ್ಚರ್ಯವನ್ನುಂಟು ಮಾಡಿರಬಹುದು. ಇದು ಇಡೀ ಸದನ, ಇಡೀ ರಾಜ್ಯ ಮತ್ತು ಇಡೀ ರಾಷ್ಟ್ರ ಹೆಮ್ಮೆ ಪಡುವಂಥಾದ್ದು. ಇದಕ್ಕಾಗಿ ನಮ್ಮ ಪ್ರಧಾನಿಗಳಿಗೆ ಮತ್ತು ಅದಕ್ಕೋಸ್ಕರ ಹಿಂದೆ ಕೆಲಸ ಮಾಡಿದಂಥ ವಿಜ್ಞಾನಿಗಳಿಗೆ ಈ ಸದನದ ವತಿಯಿಂದ ನಮ್ಮ ಕೃತಜ್ಞತೆಗಳನ್ನು ಮತ್ತು ವಂದನೆಗಳನ್ನು ಅರ್ಪಿಸುತ್ತೇವೆ.

ಅಧ್ಯಕ್ಷರು : ರೆಸೂಲ್ಯೂಷನ್ ಡ್ರಾಫ್ಟ್ ಮಾಡಿ ಮಧ್ಯಾಹ್ನ ಅಡಾಪ್ಟ್ ಮಾಡೋಣ.

ಸಕ್ಕರೆ ಉದ್ದಿಮೆ ವ್ಯವಸ್ಥೆ ಮತ್ತು ನೀತಿ ಕುರಿತು ಉನ್ನತಾಧಿಕಾರ ಸಮಿತಿ ಕೊಟ್ಟಿರುವ ವರದಿಯ ಮೇಲೆ ರಾಜ್ಯ ಸರ್ಕಾರ ಸಲಹೆಯನ್ನು ಕೇಂದ್ರಕ್ಕೆ ಕಳುಹಿಸುವುದು.

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ಮಾನ್ಯ ಅಧ್ಯಕ್ಷರೇ, ಸಕ್ಕರೆ ಉದ್ದಿಮೆಯ ವ್ಯವಸ್ಥೆ ಮತ್ತು ನೀತಿ ಕುರಿತು ಉನ್ನತಾಧಿಕಾರ ಸಮಿತಿ ಕೊಟ್ಟಿರುವ ವರದಿಯ ಮೇಲೆ ರಾಜ್ಯ ಸರ್ಕಾರ ಸಲಹೆ ಕಳುಹಿಸುವ ಕುರಿತು. ಸಕ್ಕರೆ ಉದ್ದಿಮೆಗೆ ಸಂಬಧಿಸಿದಂತೆ ಸಕ್ಕರೆ ಬೆಲೆ ನಿಯಂತ್ರಣ, ಕೈಗಾರಿಕೆಯಲ್ಲಿ ತಂತ್ರಜ್ಞಾನ ಸುಧಾರಣೆ ಮತ್ತು ಕಬ್ಬು ಬೆಳೆಗಾರರಿಗೆ ವರಮಾನದಾಯಕ ಬೆಲೆ ದೊರೆಯುವಂತೆ ಮಾಡುವುದು ಮೊದಲಾದ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ವರದಿ ಕೊಡಲು ಕೇಂದ್ರ ಸರ್ಕಾರದ ನಿವೃತ್ತ ಹಿರಿಯ ಅಧಿಕಾರಿ, ಶ್ರೀ ಮಹಾಜನ್‌ರವರ ಹಿರಿತನದಲ್ಲಿ ಉನ್ನತಾಧಿಕಾರ ಸಮಿತಿಯನ್ನು ನೇಮಿಸಲಾಗಿತ್ತು. ಆ ಸಮಿತಿಯವರು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಒಂದು ತಿಂಗಳಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರದ ಮಾನ್ಯ ಕೃಷಿ ಸಚಿವರು ಹೇಳಿರುವುದಾಗಿ ಪ್ರಕಟವಾಗಿದೆ. ಆ ವರದಿಯಲ್ಲಿ ಪ್ರಗತಿಪರ ಬದಲಾವಣೆಗಳಿಗೆ ಪೂರಕ ಸಲಹೆಗಳಿದ್ದರೂ, ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರ ಶೋಷಣೆಯಾಗದಂತೆ ಕಾನೂನು ಮತ್ತು ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳು ಇರಬೇಕಾದುದು ಅವಶ್ಯಕವಾಗಿದೆ. ಈ ದೃಷ್ಟಿಯಿಂದ ಕಬ್ಬು ಬೆಳೆಗಾರರ ಹಾಗೂ ಕಾರ್ಖಾನೆಯ ಪ್ರತಿನಿಧಿಗಳು ಇಬ್ಬರನ್ನೂ ಸರ್ಕಾರದವರು ಕರೆದು, ಚರ್ಚಿಸಿ, ಸರ್ಕಾರದ ಮುಖಾಂತರ ಸಲಹೆ ಕಳುಹಿಸುವಂತೆ ಮಾಡಲು ಕೋರುತ್ತೇನೆ. ಕೇಂದ್ರ ಸರ್ಕಾರ ಶೀಘ್ರದಲ್ಲೇ ತೀರ್ಮಾನ ತೆಗೆದುಕೊಳ್ಳಲಿರುವುದರಿಂದ ವಿಳಂಬವಿಲ್ಲದೆ, ಕೂಡಲೇ ಕ್ರಮ ತೆಗೆದುಕೊಳ್ಳಲು ವಿನಂತಿಸುತ್ತೇನೆ.

ಶ್ರೀ ಉಮೇಶ್ ಕತ್ತಿ (ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಧ್ಯಾಹ್ನದ ಒಳಗಾಗಿ ಮಾಹಿತಿಯನ್ನು ತರಿಸಿಕೊಂಡು ಉತ್ತರವನ್ನು ಒದಗಿಸಿಕೊಡುತ್ತೇವೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಕ್ರಾಂತಿಯೋಗಿ ಬಸವಣ್ಣನವರು ಹುಟ್ಟಿದ ಮನೆಯನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡುವುದು.

ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ (ಬಿಜಾಪುರ) : ಮಾನ್ಯ ಅಧ್ಯಕ್ಷರೇ, ಬಸವನ ಬಾಗೇವಾಡಿಯಲ್ಲಿರುವಂಥ ಕ್ರಾಂತಿಯೋಗಿ ಬಸವಣ್ಣ ನವರ ಮನೆಯನ್ನು ವಶಪಡಿಸಿಕೊಂಡು ಅಲ್ಲಿ ರಾಷ್ಟ್ರೀಯ ಸ್ಮಾರಕವನ್ನು ಮಾಡಬೇಕು ಎನ್ನುವ ಯೋಜನೆ, ದಿವಂಗತ ದೇವರಾಜ ಅರಸುರವರ ಕಾಲದಿಂದಲೂ ಯೋಜನೆಯಾಗಿಯೇ ಉಳಿದಿದೆ. ಆದ್ದರಿಂದ ಸರ್ಕಾರ ದಯವಿಟ್ಟು, ಸಾಮಾಜಿಕ ಕ್ರಾಂತಿಯನ್ನು ಮಾಡಿದಂಥ ವಿಶ್ವಗುರು ಬಸವಣ್ಣನವರು ಹುಟ್ಟಿದಂಥ ಮನೆಯನ್ನು ವಶಪಡಿಸಿಕೊಂಡು, ಅಲ್ಲಿ ರಾಷ್ಟ್ರೀಯ ಸ್ಮಾರಕವನ್ನು ಮಾಡಬೇಕು ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು